ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಸೀಲಿಂಗ್ ಲಿಮಿಟ್‌ಗಿಂತ ಹೆಚ್ಚಾದ್ದರಿಂದ ಕಾರ್ಯಗತ ಮಾಡಲಿಲ್ಲ.

ಶ್ರೀ ಪಿ. ಆನಂದಕುಂದ ಹೆಗ್ಗಡೆ —ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಈ ಯೋಜನೆಯನ್ನು ಸದ್ಯಕ್ಕೆ ಕೈಬಿಡಲಾಗಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದೀರಿ. ಮುಂದೆ ಯಾವಾಗ ಇದನ್ನು ತೆಗೆದುಕೊಳ್ಳುತ್ತೀರಾ ಎನ್ನುವುದು ತಿಳಿಸಲಿಕ್ಕೆ ಸಾಧ್ಯವೇ ? ಆರ್ಥಿಕವಾಗಿ ಲಾಭ ಇದೆ ಎಂದು ಮೊದಲು ತಿಳಿದಿದ್ದು ಇದ್ದಕಿದ್ದ ಹಾಗೆ ನಷ್ಟ ಆಗುತ್ತದೆ ಎನ್ನುವುದನ್ನು ಅಧಿಕಾರಿಗಳು ಸೃಷ್ಟಿಸಿದ್ದಾರೆಯೇ ಅಥವಾ ಯಾರು ಸೃಷ್ಟಿ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಸೀಲಿಂಗ್ ಲಿಮಿಟ್ ಫಿಕ್ಸ್ ಮಾಡಿರುವುದು ೨೭೫೦, ಇದು ೩೧೭೩ ಇದೆ. ಆದ್ದರಿಂದ ಇದನ್ನು ಕೈಬಿಡಲಾಗಿದೆ.

ಶ್ರೀ ಪಿ. ಆನಂದಕುಂದ ಹೆಗ್ಗಡೆ.—ಈ ಹೊಳೆಯಿಂದ ೫ ಮೈಲಿಯವರೆಗೆ ಸಿಹಿ ನೀರು ಸಿಕ್ಕುತ್ತದೆ ಎನ್ನುವುದನ್ನು ಗಮನಿಸಿದ್ದೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗ ಸದ್ಯಕ್ಕೆ ಆ ಯೋಜನೆಯನ್ನು ಕೈಬಿಡಲಾಗಿದೆ.

ಅಧ್ಯಕ್ಷರು.—ಇದು ಸೆಲೆನಿಟಿ ಡೆವಲಪ್ ಆದರೆ ವ್ಯವಸಾಯಕ್ಕೆ ತೊಂದರೆಯಾಗುತ್ತದೆ. it is not the economic feasibility that should be taken into consideration. ರೆಕ್ಲಮೇಷನ್ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಆ ದೃಷ್ಟಿಯಿಂದ ವಿಚಾರ ಮಾಡಬಹುದಲ್ಲವೇ ಎಂದು ಕೇಳುತ್ತಿದ್ದಾರೆ.

SRI M. M. J. SADYOJATHA.—Sir, when that dam is constructed it is likely to cause inundation in the upstream region. Further, the salt water dam will be an hindrance to navigation, fishing and other things. That is why, this scheme has been left over.

## Conversion of 5 Kms. non-chargeable deviation route to Kogali in Hagaribommanahalli, Bellary District.

127 SRI KOGALI N. KARIBASAVANAGOWDA (Hadagali).—Will the Minister for Transport and Minor Irrigation be pleased to state:—

(a) whether it is a fact that some representations have been received by Government from the public or by concerned M.L.A. to convert 5 Kms. non-chargeable deviation route to Kogali in Hagaribommanahalli (Bellary District) by Karnataka State Road Transport Corporation Authorities.

(b) if so, the reasons for the delay in converting this route may be furnished.

SRI M. M. J. SADYOJATHA (Minister for Transport and Minor Irrigation).—

(a) Yes.

(b) At present, the Hadagali-Bangalore and Mylara-Bangalore services are being operated *via* Kogali village and the deviation from Kogali cross to Kogali village is treated as chargeable since the to and fro distance of the deviated route is considerable.

ಶ್ರೀ ಎನ್. ಕರಿಬಸವನಗೌಡ.—ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹಡಗಲಿ, ಬೆಂಗಳೂರು ಮತ್ತು ಮೈಲಾರ, ಬೆಂಗಳೂರು ಈ ರೀತಿ ಎರಡು ಮಾರ್ಗ ಇದೆ ಎಂದು ತಿಳಿಸಿದ್ದಾರೆ. ಈ ಒಂದು ಮಾರ್ಗದಲ್ಲಿ ಸುಮಾರು ೬ ಬಸ್ಸುಗಳೆ ಓಡಾಟ ಇದೆ. ಹಡಗಲಿ-ಬೆಂಗಳೂರು, ರಾಣೆಬೆನ್ನೂರು ಬೆಂಗಳೂರು, ಕೊಟ್ಟೂರು-ಬೆಂಗಳೂರು ಈ ರೀತಿ ೬ ಬಸ್ಸುಗಳ ಓಡಾಟ ಇದೆ. ಮಾನ್ಯ ಮಂತ್ರಿಗಳು ಕೋಗಾಲಿ ಗ್ರಾಮಕ್ಕೂ ಮುಖ್ಯ ರಸ್ತೆಗೂ ಅತಿ ಹೆಚ್ಚಿನ ಅಂತರವಿರುವುದರಿಂದ ಈ ಅಂತರವು ದರ ಸಹಿತವಾಗಿ ಪರಿವರ್ತಿಸಲಾಗಿದೆ ಎಂದು ತಿಳಿಸಿದ್ದಾರೆ. ಇತ್ತೀಚೆಗೆ ೫ ಕಿಲೋಮೀಟರ್‌ಗೂ ಹೆಚ್ಚಿಗೆ ಇರತಕ್ಕ ಡೀವಿಯೇಷನ್ ರಸ್ತೆಗಳಲ್ಲಿ ಓಡಾಡುವಾಗ ಚಾರ್ಜ್ ಮಾಡದೇ ಇರತಕ್ಕ ಕೆಲವು ವಿಷಯಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ನಿರ್ದಿಷ್ಟವಾಗಿ ೫ ಕಿಲೋಮೀಟರ್‌ಗಿಂತ ಹೆಚ್ಚು ಎಲ್ಲಿ ಇದೆ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿಸಬೇಕು.

ಶ್ರೀ ಎನ್. ಕರಿಬಸವನಗೌಡ.—ಬೆಂಗಳೂರು ಬಳ್ಳಾರಿ, ಮೊಳಕಾಲ್ಮೂರು ಮಾರ್ಗ, ಬೆಂಗಳೂರು, ರಾಣೆಬೆನ್ನೂರು, ಸಿರಗೆರೆ, ಮಾರ್ಗ, ಈ ರೀತಿ ಅನೇಕ ಮಾರ್ಗಗಳು ಇವೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಸಿರಿಗೆರೆ ಬಸ್ಸು ಹಿಂದೆ ಕೊಟ್ಟಿರತಕ್ಕಂತಾದ್ದು;

ಶ್ರೀ ಎನ್. ಕರಿಬಸವನಗೌಡ.—ಹಿಂದೆ ಕೊಟ್ಟಿದ್ದೋ, ಮುಂದೆ ಕೊಟ್ಟಿದ್ದೋ, Is it not a precedent ? ರಸ್ತೆ ಸಂಠಿಗೆ ಅಧಿಕಾರಿಗಳು ಯಾವಾಗಲೂ ಆದಾಯದ ಬಗೆ ಯೋಚನೆ ಮಾಡುತ್ತಾರೆಯೇ ವಿನಹ ಜನರ ತೊಂದರೆ ಬಗ್ಗೆ ಆಲೋಚನೆ ಮಾಡುವುದಿಲ್ಲ. ಈಗ ೧೦ ಮೈಲಿ ಡೈರೆಕ್ಟ್ ರೂಟ್ ಇರುವಾಗ ಒಬ್ಬ ಪ್ರಯಾಣಿಕ ೫ ಕಿಲೋಮೀಟರ್ ಡೀವಿಯೇಷನ್ ಹೋಗಿ ಮತ್ತೆ ಮೈನ್ ರೋಡ್‌ಗೆ ಬರಬೇಕಾಗುತ್ತದೆ. ಈ ಅಂತರವನ್ನು ದರ ಸಹಿತವಾಗಿ ಪರಿವರ್ತಿಸುವುದಾದರೆ ಪ್ರಯಾಣಿಕರಿಗೆ ತೊಂದರೆಯಾಗುವುದಿಲ್ಲವೆ ಈ ತೊಂದರೆಯನ್ನು ತಪ್ಪಿಸಲಿಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಟು ಅಂಡ್ ಫೌರ್ ಡಿಸ್ಟೆನ್ಸ್ ಒಂದು ಕಿಲೋಮೀಟರ್‌ಗಿಂತಲೂ ಜಾಸ್ತಿ ಆದರೆ ಅದನ್ನು ಕನ್‌ಸಿಡರ್ ಮಾಡುವುದಿಲ್ಲ.

ಶ್ರೀ ಎನ್. ಕರಿಬಸವನಗೌಡ.—ಅಧ್ಯಕ್ಷರೆ, ಕೆಲವು ರಸ್ತೆಯಲ್ಲಿ ಕನ್‌ಸಿಡರ್ ಮಾಡಿದ್ದಾರೆ. ಮಾನ್ಯ ಮಂತ್ರಿಗಳ ಕ್ಷೇತ್ರಕ್ಕೂ ನನ್ನ ಕ್ಷೇತ್ರಕ್ಕೂ ಅದು ಮಧ್ಯೆ ಬರುತ್ತದೆ. ಈ ಪ್ರಿಸಿಡೆಂಟ್ ಇಲ್ಲ ಅಂದರೆ ಹೊಸದಾಗಿ ಏತಕ್ಕೆ ಮಾಡಬಾರದೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

SRI M.M.J. SADYOJATHA.—I will get it examined.

## Statistics regarding beggars in the State

460. SRI BHIMANNA KHANDRE (Bhalki).—Will the Minister for Social Welfare and Back ward classes be pleased to state :—

(a) the number of Beggars in the State, Districtwise figures may be furnished ;

(b) the amount allotted for Beggars Relief and the total amount spent so far, District-wise ;

(c) the number of beggars in the State from the year 1970, yearwise data about the number of beggars, their houses, amount spent each year on them District-wise ;

(d) whether the compulsory education scheme is applied to the beggars children, if so, the number of their children who are admitted in the School each year from 1976 to 1980 ;